# ಆಹಾ ಸುದ್ದಿ!

★ ಸಸಿತೋಟ



ಪೋಲೆಂಡ್‌ನಲ್ಲಿರುವ ‘ಅಡ್ಡಾದಿಡ್ಡಿ’ ಅರಣ್ಯವಿದು. ಇಲ್ಲಿರುವ 400ಕ್ಕೂ ಅಧಿಕ ಮರಗಳು ಬುಡದಲ್ಲಿ ಒಂದೇ ದಿಕ್ಕಿನಲ್ಲಿ 90 ಡಿಗ್ರಿಯಷ್ಟು ಬಾಗಿವೆಯಂತೆ. ಬಳುಕುವ ಲತೆಯಂತೆ ಎನ್ನುವ ಬದಲು ಬಳುಕುವ ಮರಕ್ಕೂ ತರಳೆಯ ನಡುವನ್ನು ಹೋಲಿಸಬಹುದು.



ದೂರ ದೂರವಿದ್ದು ವಿರಹ ಅನುಭವಿಸುವ ದಂಪತಿಗೆಂದೇ ಜಪಾನಿನ ಪಾನ ಗೃಹವೊಂದು ‘ಸಿಂಕ್ ಡಿನ್ನರ್’ ಎಂಬ ಹೊಸ ವಿಧಾನ ಕಂಡು ಹಿಡಿದಿದೆ. ಆ ಕಡೆ ಪತಿ/ ಗೆಳೆಯ ಹಾಗೂ ಈ ಕಡೆ ಪತ್ನಿ/ ಗೆಳತಿ ದೊಡ್ಡ ಮಾನಿಟರ್ ಮುಂದೆ ಕುಳಿತು ಚೀಯರ್ಸ್ ಎಂದು ವೈನ್ ಗುಟುಕರಿಸಿದರಾಯ್ತು. ನಂತರ ಡಾನ್ಸ್ ಮಾಡುವುದಕ್ಕೆ ಸಂಗಾತಿ ಹುಡುಕಿಕೊಳ್ಳುವಾಗ ಮಾನಿಟರ್ ಎದುರಿನಿಂದ ಆಚೆ ಎದ್ದು ಹೋಗುವ ಅವಕಾಶವನ್ನೂ ಪಾನ ಗೃಹ ನೀಡಿರಬಹುದು.

ಸಿಡ್ನಿಯಲ್ಲಿ ಮಧ್ಯರಾತ್ರಿ ಮನೆಯೊಂದರಿಂದ ‘ನಾನು ನಿನ್ನನ್ನು ಕೊಂದು ಬಿಡುತ್ತೇನೆ’ ಎನ್ನುವ ಗಂಡಸಿನ ಕೂಗಿನ ಜೊತೆ ಕೀರಲು ಸ್ವರದಲ್ಲಿ ಚೀರಾಟ ಕೇಳುತ್ತಿತ್ತು. ನೆರೆಯವರು ಪೊಲೀಸ್‌ಗೆ ಕೌಟುಂಬಿಕ ಹಿಂಸೆ ಎಂದು ಫೋನ್ ಮಾಡೇಬಿಟ್ಟರು. ಧಾವಿಸಿ ಬಂದ ಪೊಲೀಸ್ ಪಡೆ ಬಾಗಿಲು ತೆರೆಸಿದಾಗ ಕಂಡದ್ದು ಗಂಡಸು ಮಾತ್ರ. ಹೆಂಡತಿ/ ಸ್ನೇಹಿತೆಯ ಕೊಲೆಯಾಗಿದೆ ಎಂದು ನಿರ್ಧರಿಸಿದ ಪೊಲೀಸರು ವಿಚಾರಣೆ ನಡೆಸಿದಾಗ ಜೇಡವೆಂದರೆ ತನಗೆ ಅಲರ್ಜಿ. ಹೀಗಾಗಿ ಎರಡೆರಡು ತರದ ದನಿಯಲ್ಲಿ ಕಿರುಚುತ್ತಿದ್ದೆ ಎಂದು ದೊಡ್ಡ ಜೇಡವನ್ನು ತೋರಿಸಿದನಂತೆ. ಸದ್ಯ, ಮಾಟ ಮಾಡಿ ಹೆಂಡತಿಯನ್ನು ಜೇಡದ ರೂಪದಲ್ಲಿಟ್ಟಿದ್ದಾನೆ ಎಂದು ನೆರೆಯವರು ದೂರು ಕೊಡಲಿಲ್ಲವಲ್ಲ...!

ಸತ್ತ ಮೇಲೂ ವ್ಯಕ್ತಿಯ ಆಲೋಚನೆಗಳನ್ನು ಜೀವಂತವಾಗಿಡುವ ಬಗ್ಗೆ ಆಸ್ಟ್ರೇಲಿಯದ ಸ್ಟಾರ್ಟ್ ಅಪ್ ಸಂಸ್ಥೆಯೊಂದು ಸಂಶೋಧನೆ ಮಾಡುತ್ತಿದೆಯಂತೆ. ವ್ಯಕ್ತಿಯ ಮೆದುಳಿನಲ್ಲಿರುವ ಆಲೋಚನೆಗಳನ್ನು ಡೌನ್‌ಲೋಡ್ ಮಾಡಿ ರೊಬಾಟ್‌ನ ತಲೆಯೊಳಗೆ ತುಂಬಿಸುತ್ತದಂತೆ. ಹೀಗಾದರೆ ಎಲ್ಲರೂ ಒಳ್ಳೊಳ್ಳೆ ಆಲೋಚನೆಯನ್ನೇ ಮಾಡಬಹುದು. ಇಲ್ಲವಾದರೆ ಎದುರು ಮನೆಯಾಕೆಯ ಮೇಲಿನ ಮೋಹ, ಆಕೆಯ ಗಂಡನನ್ನು ತೊಲಗಿಸುವ ಆಲೋಚನೆ.. ಎಲ್ಲವನ್ನೂ ರೊಬಾಟ್ ಅನುಕರಿಸುತ್ತ ಹೋಗುವ ಭಯ ಸಾಯುವ ಭಯಕ್ಕಿಂತ ಹೆಚ್ಚು.



ಬ್ಯಾಂಕಾಕ್‌ನ ಲೋಪ್‌ಬುರಿಯಲ್ಲಿ ವರ್ಷಕ್ಕೊಮ್ಮೆ ಮಂಗಗಳ ಭೋಜನಕೂಟ ನಡೆಯುತ್ತದೆ. 2000ಕ್ಕೂ ಅಧಿಕ ಸಂಖ್ಯೆಯಲ್ಲಿರುವ ಮಂಗಗಳಿಂದಾಗೇ ಅಲ್ಲಿಗೆ ಪ್ರವಾಸಿಗರು ಭೇಟಿ ನೀಡುತ್ತಾರಂತೆ. ಕೃತಜ್ಞತಾ ಸಮಾವೇಶಕ್ಕೆ ಮಂಗಗಳು ಉತ್ತಮವಾಗೇ ಪ್ರತಿಕ್ರಿಯಿಸಿವೆ.



ಇಂಗ್ಲೆಂಡ್‌ನ ಜೇನ್ ಬ್ರೌನ್ ಎಂಬಾಕೆ 300 ಬೀದಿ ನಾಯಿಗಳಿಗೆ ಕ್ರಿಸ್ಮಸ್ ಉಡುಗೊರೆ ಎಂದು ಬೆಚ್ಚನೆಯ ಉಣ್ಣೆಯ ಉಡುಗೆ ಹೆಣೆದು ಕೊಟ್ಟಿದ್ದಾಳೆ. ಕಳೆದ ಐದು ವರ್ಷಗಳಲ್ಲಿ ಆಕೆ 4000 ಗಂಟೆಗಳನ್ನು ಇದಕ್ಕಾಗಿ ಮೀಸಲಿಟ್ಟಿದ್ದಳಂತೆ. ಜೇನ್ ಉಣ್ಣೆನೂಲಿನ ಉಂಡೆ, ಕ್ರೋಶಾ ಕಡ್ಡಿ ಹಿಡಿದಳೆಂದರೆ ಯಾವುದೋ ನಾಯಿ ಬೀದಿಗೆ ಬಿದ್ದಿದೆ ಎಂಬ ಸುದ್ದಿ ಹರಡುತ್ತದೆ.